1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.103/2017

ದಿಃ 08.10.2021

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-5 Pw-3

| | | |
|---|---|---|
| ಹೆಸರು | ಃ | ಮನು |
| ತಂದೆಯ ಹೆಸರು | ಃ | ರಾಮು |
| ವಯಸ್ಸು | ಃ | 24 ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸಸ್ಥಳ | ಃ | ಮಾರಮ್ಮನಬೀದಿ,<br>ದೇವಮಾಚೋಹಳ್ಳಿ,<br>ಬೆಂಗಳೂರು ದಕ್ಷಿಣ ತಾಲ್ಲೂಕು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಮೃತ ನವೀನ್‌ಕುಮಾರ್ ನನಗೆ ಗೊತ್ತು. ಆತ ನಮ್ಮ ಊರಿನವನೇ. ಚಾಸಾ.4 ಮತ್ತು 6 ಗೊತ್ತು. ಚಾಸಾ.2 ಮತ್ತು 5ರವರು ಗೊತ್ತಿಲ್ಲ. ಮೃತ ನವೀನ್ ಕುಮಾರ ಯಾವ ಕಾರಣಕ್ಕೆ ಮೃತಪಟ್ಟಿರುತ್ತಾನೆಂದು ಗೊತ್ತಿಲ್ಲ. ಆತನಿಗೆ ಯಾರು ಏನು ಮಾಡಿದರು ಎಂದು ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳು ನಮ್ಮ ಊರಿನವರೇ ಇದ್ದು ನನಗೆ ಪರಿಚಯ. ಆರೋಪಿಗಳು ಯಾವುದೇ ಕೃತ್ಯ ಎಸಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನವೀನ್ ಕುಮಾರ್ ಮೃತನಾಗುವ ಸಮಯದಲ್ಲಿ ನಾನು ಇರಲಿಲ್ಲ. ಆ ತಯಾವ ಕಾರಣಕ್ಕೆ ಮತ್ತು ಹೇಗೆ

ಮೃತಪಟ್ಟಿರುತ್ತಾನೆಂದು ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

ನನಗೀಗ ಓದಿ ಹೇಳಿ, ನಿ.ಪಿ.9 ಎಂದು ಗುರುತಿಸಲಾದ ದಸ್ತಾವೇಜಿನಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆಂದು ಸೂಚಿಸುವುದು ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಟಿ.ಜಿ., ವಕೀಲರಿಂದ ಆರೋಪಿಗಳ ಪರವಾಗಿಃ ಇಲ್ಲವೆಂದಿದ್ದಾರೆ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ದಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.